ಅದೇನು ಹೇಳು' ಎಂದಿತು. ಆಗ ನರಿ ದೂರದಲ್ಲಿ ಆಹಾರ ತಿನ್ನುತ್ತಿದ್ದ ಹುಂಜಗಳತ್ತ ಕೈ ತೋರಿ 'ಅವುಗಳ ಪೈಕಿ ಒಂದೊಂದನ್ನೇ ಈ ಮರದ ಕೆಳಗೆ ಕರೆದು ತಾ. ಅದಕ್ಕೆ ನೀನು ಏನು ಯೋಜನೆ ಮಾಡುತ್ತೀಯೋ ಗೊತ್ತಿಲ್ಲ ಅಂತೂ ಅವು ಒಟ್ಟಿಗೆ ಬರದೇ ಒಂದೊಂದಾಗಿ ಬರುವಂತೆ ಮಾಡು. ತಪ್ಪಿದಲ್ಲಿ...' ಅನ್ನುತ್ತಿದ್ದಂತೆ ಭಯಗೊಂಡ ಮೊಲ 'ಇಲ್ಲ... ನಾನು ಹೇಗಾದರೂ ಮಾಡಿ ಅವುಗಳನ್ನು ನೀನು ಹೇಳಿದ ಜಾಗಕ್ಕೆ ಕರೆದು ತರುವೆ' ಎಂದಿತು.

ಅಷ್ಟು ಹೇಳಿ ಮೊಲ ಅಲ್ಲಿಂದ ಆ ಹುಂಜಗಳ ಬಳಿ ಹೊರಟಾಗ ಎದುರುಗಡೆಯಿಂದ ಬರುತ್ತಿದ್ದ ಕರಡಿಯೊಂದು ಅಳುತ್ತ ಹೊರಟ ಮೊಲವನ್ನು ಕಂಡು 'ಯಾಕೆ ಏನಾಯ್ತು... ಕಣ್ಣೀರೇಕೆ' ಎಂದು ಕಾಳಜಿಯಿಂದ ಕೇಳಿತು. ಸುಧಾರಿಸಿಕೊಂಡ ಮೊಲ. ಆಗ ನರಿಯ ವಿಚಾರ ಒಂದೂ ಬಿಡದೇ ಹೇಳಿತು. ಆಗ ಕರಡಿ 'ಹೋ.. ಹಾಗೋ ವಿಷಯ... ನೀನೇನೂ ಚಿಂತೆ ಮಾಡಬೇಡ, ಆ ನರಿ ಎಲ್ಲಿದೆ ತೋರಿಸು' ಎಂದಾಗ ಮೊಲ ನರಿ ಅವಿತುಕೊಂಡ ಜಾಗ ತೋರಿಸಿ, ಹುಂಜಗಳ ಬಳಿ ಬಂದಿತು. ಅದು ಅಲ್ಲಿಗೆ ಬಂದು ಹುಂಜಗಳಿಗೆ ನಯವಾಗಿ 'ಅಣ್ಣಂದಿರಾ ಇದಕ್ಕಿಂತ ರುಚಿಯಾದ ಹುಳು ಹುಪ್ಪಟೆಗಳು, ಅಗೋ ಆ ಮರದ ಕೆಳಗಿವೆ, ನೀವು ಏನೂ ಕಷ್ಟ ಪಡಬೇಕಿಲ್ಲ' ಎಂದು ಹೇಳಿದಾಗ ಹಸಿದ ಹುಂಜಗಳು ಅತ್ತ ಹೊರಟು ನಿಂತವು. ಆಗ ಪುನಃ ಮೊಲ 'ಹಾಂ... ಆತುರ ಮಾಡಬೇಡಿ. ಅಲ್ಲಿ ಇಬ್ಬರೂ ಒಟ್ಟಿಗೆ ಹೋಗದೆ ಒಬ್ಬೊಬ್ಬರಾಗಿ ಹೋಗಬೇಕು' ಎಂದು ನುಡಿಯಿತು. 'ಹಾಗೇ ಆಗಲಿ' ಎಂದು ಮೊದಲು ಕರಿಯ ಹೊರಟಿತು. ದೂರದಿಂದಲೇ ಒಂದು ಹುಂಜ ಬರುವುದನ್ನು ಕಂಡ ನರಿ, ಮನದಲ್ಲಿ ಹಿರಿ ಹಿರಿ ಹಿಗ್ಗಿ ಪರವಾಗಿಲ್ಲ ಮೊಲ ನನ್ನ ಮಾತು ಪಾಲಿಸಿದೆ ಎನ್ನುತ್ತ ತನ್ನ ಹತ್ತಿರ ಬರುತ್ತಿದ್ದ ಹುಂಜದ ಮೇಲೆ ಇನ್ನೇನು ಹಾರಬೇಕು ಎನ್ನುವಷ್ಟರಲ್ಲಿ ನರಿಯ ಹಿಂದೆ ಬಂದ ಕರಡಿ ಅದರ ಬಾಲ ಹಿಡಿದು ಗಾಳಿಯಲ್ಲಿ ಜೋರಾಗಿ ತಿರುಗಿಸಿ ದೂರ ಎಸೆಯಿತು. ಅದರ ರಭಸಕ್ಕೆ ನರಿ ದೊಡ್ಡ ಬಂಡೆಗೆ ಅಪ್ಪಳಿಸಿ ಪ್ರಾಣ ಬಿಟ್ಟಿತು. ಈ ಗಲಾಟೆಯಲ್ಲಿ ಎರಡೂ ಹುಂಜಗಳು ಅಲ್ಲಿಗೆ ಬಂದಾಗ ಕರಡಿ ಅವುಗಳಿಗೆ 'ಇಂದು ನಿಮ್ಮ ಪ್ರಾಣ ಉಳಿಯಲು ಮೊಲ ತನ್ನ ಪ್ರಾಣ ಲೆಕ್ಕಿಸದೇ ಸಹಾಯ ಮಾಡಿತು' ಎಂದು ಹೇಳಿದಾಗ ಸಂತೋಷಪಟ್ಟ ಆ ಹುಂಜಗಳು ಮೊಲಕ್ಕೆ ಧನ್ಯವಾದವನ್ನು ಅರ್ಪಿಸಿ, ಮತ್ತೆ ಓಡೋಡಿ ಬಂದು ತಮ್ಮ ಯಜಮಾನಿಯ ಗುಡಿಸಲಿನ ಬಳಿ ನಿಂತು 'ಸಾಕಪ್ಪಾ... ಸಾಕು, ನಾವು ಇನ್ನೆಲ್ಲಿಗೂ ಹೋಗಲ್ಲ' ಎಂದು ಶಪಥ ಮಾಡಿದವು. ಕಳೆದು ಹೋಗಿದ್ದ ಹುಂಜಗಳನ್ನು ಕಂಡು ಅಜ್ಜಿ ಹಿರಿ ಹಿರಿ ಹಿಗ್ಗಿದಳು. ■

# ಪುಟ್ಟನ ಪಟ್ಟು



■ **ಶಂಕರಾನಂದ ಹೆಬ್ಬಾಳ, ಇಲಕಲ್ಲ**

ಕಲೆ: ಸಂತೋಷ್ ಸಸಿಹಿತ್ಲು

ಪುಟ್ಟ ನಿಂದು
ಪಟ್ಟ ಹಿಡಿದು
ಸಿಟ್ಟಿ ನಿಂದ ಓಡಿದ
ಕಟ್ಟ ಕಡೆಗೆ
ಕಟ್ಟೆ ಮೇಲೆ
ಭೆಟ್ಟಿಯಾದ ಅಜ್ಜನ

ಮೋಟು ಗೈಲಿ
ನೋಟು ಹಿಡಿದು
ಕಾಟವನ್ನು ಕೊಟ್ಟಿತು
ಪಾಠ ಓದು
ಏಟು ಬೇಕೆ
ಚೋಟು ಹೋಗು ಸುಮ್ಮನೆ

ಅಜ್ಜ ಬಂದು
ಅಜ್ಜಿ ಕರೆದು
ಬಜ್ಜಿ ಮಾಡಿ ತಿನಿಸುತ
ಮಜ್ಜಿಗೆ ಕುಡಿ
ಸಜ್ಜೆ ರೊಟ್ಟಿ
ಕಜ್ಜಿ ಕಾಯಿ ಕೊಟ್ಟನು

ಪೀಪಿ ಕೊಡಿಸು
ಟೋಪಿ ಕೊಡಿಸು
ಕೋಪದಿಂದ ಹೇಳಿದ
ತಾಪವಾದ
ಪಾಪುವನ್ನು
ಪೇಪೆ ಕೊಡುವೆ ಎಂದನು

ಸಪ್ಪ ಮುಖವ
ಗಪ್ಪ ಮಾಡಿ
ಬೆಪ್ಪನಂತೆ ಕುಳಿತಿತು
ತಪ್ಪ ಮಾಡಿ
ಒಪ್ಪದಲ್ಲಿ
ತಿಪ್ಪೆಯಲ್ಲಿ ಹೊರಳಿತು

ಮತ್ತೆ ನೋಡಿ
ಸುತ್ತ ಕಾದು
ಮೆತ್ತ ಮೆತ್ತನು ಕೊಡಲದು
ಅತ್ತ ಇತ್ತ
ಕತ್ತು ಸರಿಸಿ
ವಿತ್ತ ಪಡೆದು ಓಡಿತು

## ಕುಂಚ ಪ್ರಪಂಚ



**ಕೃಷ್ಣ ಶಿವಾಜಿ ಜಗತಾಪ**
7ನೇ ತರಗತಿ
ಸರಕಾರಿ ಹಿರಿಯ ಪ್ರಾಥಮಿಕ ಶಾಲೆ
ಡೋರಿ, ಅಳ್ನಾವರ ತಾಲ್ಲೂಕು



ಇದು ಮಕ್ಕಳ ಭಾವ ವಿಕಾಸಕ್ಕೆ ವೇದಿಕೆ. ಎಳೆಯರು ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in